ಶುಲ್ಕದಿಂದ ವಿನಾಯಿತಿ, ಸ್ಥಳೀಯರ ವಾಹನಗಳಿಗೆ ಮಾಸಿಕ ಪಾಸ್‌ಗಳನ್ನು ನೀಡುವುದು ಮತ್ತು ಜಿಲ್ಲೆಯ ವಾಣಿಜ್ಯ ವಾಹನಗಳಿಗೆ ಶೇಕಡ 50 ರಷ್ಟು ರಿಯಾಯಿತಿಯನ್ನು ಟೋಲ್ ನಿಯಮಾವಳಿಗಳ ಅನನುಸಾರ ನೀಡಲಾಗುತ್ತಿದೆ.

110 KV ಸಬ್ ಸ್ಟೇಷನ್

1771 (2000); ಶ್ರೀ ಐಹೊಳೆ ಡಿ. ಮಹಾಲಿಂಗಪ್ಪ (ರಾಯಭಾಗ)

ಅ) ಬೆಳಗಾವಿ ಜಿಲ್ಲೆ ರಾಯಭಾಗ ತಾಲ್ಲೂಕಿನ ಬಿರನಾಳ ಹಾಗೂ ಬೀರಡಿ ಗ್ರಾಮದಲ್ಲಿ 110 ಕೆ.ವಿ. ಸಬ್–ಸ್ಟೇಷನ್ ಮಂಜೂರಾತಿಗಾಗಿ ಪ್ರಸ್ತಾವನೆ ಸಲ್ಲಿಸಿದ್ದು, ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಪ್ರಸ್ತಾವನೆ ಮಂಜೂರಾತಿಗಾಗಿ ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಡಿ.ಕೆ. ಶಿವಕುಮಾರ್ (ಇಂಧನ ಸಚಿವರು)

ಅ) ಮತ್ತು ಆ) ಬೆಳಗಾವಿ ಜಿಲ್ಲೆ ರಾಯಭಾಗ ತಾಲ್ಲೂಕಿನ ಬಿರನಾಳ ಹಾಗೂ ಬೀರಡಿ ಗ್ರಾಮದಲ್ಲಿ 110 ಕೆ.ವಿ. ಸಬ್–ಸ್ಟೇಷನ್ ಸ್ಥಾಪಿಸುವ ಯಾವುದೇ ಪ್ರಸ್ತಾವನೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಮುಂದೆ ಇರುವುದಿಲ್ಲ.

ಕಬ್ಬು ಬೆಳೆದ ರೈತರ ಬಾಕಿ ಹಣ

1772 (2001); ಶ್ರೀ ಐಹೊಳೆ ಡಿ. ಮಹಾಲಿಂಗಪ್ಪ (ರಾಯಭಾಗ)

ಅ) ರಾಜ್ಯದಲ್ಲಿರುವ ಸಕ್ಕರೆ ಕಾರ್ಖಾನೆಗಳೆಷ್ಟು; (ಜಿಲ್ಲಾ ಮತ್ತು ತಾಲ್ಲೂಕುವಾರು ಮಾಹಿತಿ ನೀಡುವುದು);

ಆ) ಪ್ರತಿ ವರ್ಷ ಈ ಕಾರ್ಖಾನೆಗಳಲ್ಲಿ ಉತ್ಪಾದಿಸಲಾಗುತ್ತಿರುವ ಸಕ್ಕರೆಯ ಪ್ರಮಾಣವೆಷ್ಟು; (ಕಾರ್ಖಾನೆಗಳವಾರು ವಿವರ ನೀಡುವುದು)